ಸಿ.ಸಿ ನಂಬ್ರ: 938/2023
ಪಿ.ಡಬ್ಲ್ಯೂ : 1

ದಿನಾಂಕ: 22-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಜೆ ಜಿ ಎನ್. ವಕೀಲರಿಂದ

1. ಆರೋಪಿತ ನನಗೆ 7 ವರ್ಷಗಳಿಂದ ಪರಿಚಿತನಿರುತ್ತಾನೆ. ಮೀನು ವ್ಯಾಪಾರ ಮಾಡುವಾಗ ಆರೋಪಿತನ ಪರಿಚಯ ಆಗಿರುತ್ತದೆ. ಆರೋಪಿಗೆ ಮೀನು ವ್ಯಾಪಾರಕ್ಕೆ ಅಂತ ಹಣ ಕೊಟ್ಟಿರುತ್ತೇನೆ. ಪಿರ್ಯಾದಿ ಮತ್ತು ನೋಟಿಸಿನಲ್ಲಿ ಮೀನು ವ್ಯಾಪಾರಕ್ಕೆ ಹಣ ಕೊಟ್ಟಿರುತ್ತೇನೆ ಎಂದು ತಿಳಿಸಿರುತ್ತೇನೆ. ನನ್ನ ಉದ್ಯೋಗ ಮೀನು ವ್ಯಾಪಾರ. ನಾನು ಅವರಿಗೆ ನಗದು ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ 5 ಲಕ್ಷ ಹಣ ಕೊಟ್ಟಿರುತ್ತೇನೆ. ಯಾವ ದಿನಾಂಕ ಎಂದು ಗೊತ್ತಿರುವುದಿಲ್ಲ. ಆರೋಪಿತ ನನ್ನ ಬಳಿ 5 ಲಕ್ಷ ಹಣ ಕೇಳಿರುತ್ತಾನೆ. ಆತ 5 ಲಕ್ಷ ಹಣ ಕೇಳಿದ್ದು ನಾನು 5 ಲಕ್ಷ ಹಣ ಕೊಟ್ಟಿರುತ್ತೇನೆ. ನಾನು ಹಣ ಕೊಡುವಾಗ ನಾವು ಇಬ್ಬರೇ ಇದ್ದೇವು. ಆಗ ನಾನು ಯಾವುದೇ ದಾಖಲೆ ಬರೆದುಕೊಂಡಿರುವುದಿಲ್ಲ. ಆರೋಪಿತನಿಗೆ ಹಣ ನೀಡುವಾಗ ಆತನಿಂದ ಭದ್ರತೆಗೆಂದು ಒಂದು ಚೆಕ್ ಪಡೆದುಕೊಂಡಿರುತ್ತೇನೆ.

<u>ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ